ಈ) ಯೋಜನಾ ವರದಿಯನ್ನು ಪೂರ್ಣಗೊಂಡ ನಂತರ ಯೋಜನಾ ವರದಿಯನ್ನು ಕೇಂದ್ರ ಸರ್ಕಾರದ ಸಮಿತಿಗೆ ಕಳುಹಿಸಲಾಗುವುದು. ಸಹಮತಿ ಬಂದ ನಂತರ ರಾಜ್ಯದ ಸಂಪನ್ಮೂಲಗಳನ್ನು ಅವಲಂಬಿಸಿ ಈ ಯೋಜನೆಯ ಕಾರ್ಯ ತೆಗೆದುಕೊಳ್ಳಲಾಗುವುದು.

ದಂಡ ಬಾಡಿಗೆಯನ್ನು ಮನ್ನಾ ಮಾಡುವ ಬಗ್ಗೆ

೧೦೬೫(ಎ) ಶ್ರೀ ಗೋಪಾಲ ಮುಕುಂದಕಾನಡೆ, (ಸಿರ್ಸಿ.)— ಮಾನ್ಯ ಲೋಕೋಪಯೋಗಿ ಆಚ್ಚುಕಟ್ಟು ಪ್ರದೇಶಾಭಿವೃದ್ಧಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ.—

ಅ) ಸೇವಾವಧಿಗೆ ಸೀಮಿತ ನಿಯಮಗಳ ಮೇರೆಗೆ ಸರ್ಕಾರಿ ವಸತಿಗೃಹಗಳನ್ನು ಪಡೆಯಲು ಬೇಕಾಗಿರುವ ಅರ್ಹತೆಗಳಾವುವು;

ಆ) ಈ ಸೇವಾವಧಿಗೆ ಸೀಮಿತ ನಿಯಮದಂತೆ ಬೆಂಗಳೂರು ನಗರದಲ್ಲಿರುವ ಲೋಕೋಪಯೋಗಿ ಎಲ್ಲಾ ವಸತಿಗೃಹಗಳಲ್ಲಿರುವ ನೌಕರರ ಸಂಖ್ಯೆ ಎಷ್ಟು? (ನೌಕರರ ಹೆಸರು, ವಿಳಾಸ, ವಸತಿಗೃಹ ವಿಳಾಸ ಮುಂತಾದ ವಿವರಗಳನ್ನು ನೀಡುವುದು)

ಇ) ಮೇಲ್ಕಂಡ ನಿಯಮಗಳಲ್ಲಿ ದಂಡಬಾಡಿಗೆಯನ್ನು ವಸೂಲು ಮಾಡಲು ಅವಕಾಶವಿದೆಯೇ; ಹಾಗಿದ್ದಲ್ಲಿ ಇದುವರೆವಿಗೂ ವಸೂಲಂ ಮಾಡಲಾಗಿರುವ ದಂಡ ಬಾಡಿಗೆಯ ಮೊತ್ತ ಎಷ್ಟು;

ಈ) ಈ ಮೇಲ್ಕಂಡ ವಸತಿಗೃಹದ ನಿವಾಸಿಗಳಿಂದ ದಂಡ ಬಾಡಿಗೆಯನ್ನು ಮನ್ನಾ ಮಾಡಲು ಮನವಿಗಳು ಬಂದಿವೆಯೇ?

ಉ) ಹಾಗಿದ್ದಲ್ಲಿ, ಈ ಬಗ್ಗೆ ಕೈಗೊಂಡ ಕ್ರಮಗಳೇನು?

ಶ್ರೀ ಹೆಚ್.ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಸಚಿವರು).—

ಅ) ಸರ್ಕಾರಿ ವಸತಿಗೃಹ ಅಲಾಟ್‌ಮೆಂಟ್ ನಿಯಮಾವಳಿಗಳ ಪ್ರಕಾರ ಸರ್ಕಾರಿ ನೌಕರರು ವಿಧಾನ ಪರಿಷತ್ತಿನ ಸಭಾಪತಿಗಳ ವಿಧಾನ ಸಭಾಧ್ಯಕ್ಷರ ಸಚಿವರುಗಳ ರಾಜ್ಯ ಸಚಿವರುಗಳ ಉಪ ಸಚಿವರುಗಳ ಮತ್ತು ಸರ್ಕಾರದ ಕಾರ್ಯದರ್ಶಿಗಳ ಆಪ್ತ ಕಾರ್ಯದರ್ಶಿಗಳಲ್ಲಿ ಸೇವೆ ಸಲ್ಲಿಸುತ್ತಿರುವವರಿಗೆ ಮಾತ್ರ ಸೇವಾವಧಿಗೆ ಸೀಮಿತ ಆಧಾರದ ಮೇಲೆ ವಸತಿಗೃಹವನ್ನು ಪಡೆಯಲು ಅರ್ಹತೆ ಇರುತ್ತದೆ.

ಆ) ಈ ನಿಯಮದಂತೆ ಬೆಂಗಳೂರಿನ ಈ ಕೆಳಗೆ ತಿಳಿಸಿರುವ ಬಡಾವಣೆಗಳಲ್ಲಿ ಸರ್ಕಾರಿ ವಸತಿ ಗೃಹಗಳಲ್ಲಿ ಒಟ್ಟು ೪೦ ಮಂದಿ ನೌಕರರು ವಾಸವಾಗಿರುತ್ತಾರೆ. ಅವರ ಹೆಸರು, ವಿಳಾಸ ಮುಂತಾದ ವಿವರಗಳಿರುವ ಪಟ್ಟಿಯನ್ನು ಇದರೊಂದಿಗೆ ಲಗತ್ತಿಸಲಾಗಿದೆ.

ಜೀವನಭೀಮಾನಗರ	... ೧೯
ವಸಂತನಗರ	... ೬
ಜಯಮಹಲ್ ಬಡಾವಣೆ	... ೧೫
	೪೦

ಇ) ಇದೆ. ಈ ಪ್ರಕಾರ ಅನಧಿಕೃತ ವಾಸ ಮಾಡಿದ ನೌಕರರಿಂದ ದಂಡ ಬಾಡಿಗೆ ವಸೂಲು ಮಾಡಲು ಅವರವರ ಇಲಾಖಾ ಮುಖ್ಯಸ್ಥರಿಗೆ ಸೂಚಿಸಲಾಗಿದೆ.

ಈ) ಕೆಲವು ನಿವಾಸಿಗಳಿಂದ ದಂಡಬಾಡಿಗೆಯನ್ನು ಮನ್ನಾ ಮಾಡಲು ಮನವಿಗಳು ಬಂದಿವೆ.

ಉ) ದಂಡಬಾಡಿಗೆ ಮನ್ನಾ ಮಾಡಲು ಕೋರಿ ಬಂದಿರುವ ಮನವಿಗಳನ್ನು ವಿವರವಾಗಿ ಪರಿಶೀಲಿಸಲಾಗಿದೆ. ಹಾಗೂ ನಿಯಮಾವಳಿಗಳ ಪ್ರಕಾರ ದಂಡ ಬಾಡಿಗೆಯನ್ನು ಮನ್ನಾ ಮಾಡಲು ಅವಕಾಶ ಇರುವುದಿಲ್ಲವಾದ್ದರಿಂದ ಅವರ ಕೋರಿಕೆಗಳನ್ನು ಪರಿಗಣಿಸಲಾಗುವುದಿಲ್ಲ.

ಶ್ರೀ ಗೋಪಾಲ ವಂಕಲಂದ ಕಾನಡೆ ವಿಧಾನಸಭಾ ಸದಸ್ಯರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ–೧೧೬೫ (ಎ)ಗೆ ಅನುಬಂಧ

ಸೇವಾವಧಿಗೆ ಸೀಮಿತ ಆಧಾರದ ಮೇಲೆ ಸರ್ಕಾರಿ ವಸತಿಗೃಹಗಳಲ್ಲಿ ವಾಸಿಸುತ್ತಿರುವ ಸರ್ಕಾರಿ ನೌಕರರ ವಿವರಗಳು. (ಜೀವನಭೀಮಾನಗರ)

ಕ್ರಮ ಸಂಖ್ಯೆ	ವಸತಿಗೃಹ ಸಂಖ್ಯೆ	ಹೆಸರು ಮತ್ತು ವಿಳಾಸ ಶ್ರೀ: ಶ್ರೀಮತಿ	ಹಾಲಿ ಕೆಲಸ ಮಾಡುತ್ತಿರುವ ಕಛೇರಿಯ ವಿಳಾಸ
೧	೨	೩	೪
೧)	ಎ–೨:೧	ಶ್ರೀ ಬಿ.ಎಂ ಲಕ್ಷ್ಮೀನಾರಾಯಣ ಮುಖ್ಯಮಂತ್ರಿಯವರ ಸಚಿವಾಲಯ	ಆಪ್ತ ಸಹಾಯಕರಾಗಿ ಸದರಿ ಕಛೇರಿಯಲ್ಲಿ ಸೇವೆಯಲ್ಲಿರುತ್ತಾರೆ.
೨)	ಎ–೧೩:೨	ಎಂ. ಎಸ್. ನಾರಾಯಣಮೂರ್ತಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರ ಆಪ್ತ ಸಹಾಯಕ	ಆಪ್ತ ಸಹಾಯಕರಾಗಿ ಸದರಿ ಕಛೇರಿಯಲ್ಲಿ ಸೇವೆ ಸಲ್ಲಿಸುತ್ತಿರುತ್ತಾರೆ.
೩)	ಎ–೪೧:೧	ಡಿ. ವೈ. ಸೀತಣ್ಣನವರ್, ಗೃಹಸಚಿವರ ಆಪ್ತ ಸಹಾಯಕ.	ಉದ್ಯೋಗ ವಿನಿಮಯ ಕಛೇರಿಯಲ್ಲಿ ಸೇವೆ ಮಾಡುತ್ತಿರುತ್ತಾರೆ.
೪)	ಎ–೪೪:೨	ಹೆಚ್.ಎಂ. ಜವಳಿ, ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ಸಚಿವರ ಆಪ್ತ (ಸಹಾಯಕ) ಶಾಖೆ.	ಕುಂದಾಯ ಇಲಾಖೆಯಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ.
೫)	ಎ–೪೯:೩	ಬಷೀರ್ ಅಹಮದ್, ಲೋಕೋಪಯೋಗಿ ಸಚಿವರ ಆಪ್ತ ಸಹಾಯಕ.	ಸದರಿ ಕಛೇರಿಯಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ,
೬)	ಎ–೧೦೮:೧	ಕೆ. ಗಂಗಯ್ಯ, ಕೈಗಾರಿಕಾ ಮತ್ತು ವಾಣಿಜ್ಯ ಕಾರ್ಯದರ್ಶಿಗಳ ಆಪ್ತ ಸಹಾಯಕ.	ಸದರಿ ಹುದ್ದೆಯಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ.
೭)	ಎ–೧೨೦:೨	ವಿಜಯಕುಮಾರ್, ವಾರ್ತಾ ಮತ್ತು ಪ್ರವಾಸೋದ್ಯಮ ಕಾರ್ಯದರ್ಶಿಯವರ ಆಪ್ತ ಸಹಾಯಕ.	ಸದರಿ ಕಛೇರಿಯಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ.
೮)	ಎ–೧೨೮:೧	ವೈ. ರಾಜು, ಮುಖ್ಯ ಕಾರ್ಯದರ್ಶಿಯವರ ಆಪ್ತ ಸಹಾಯಕ.	ಸದರಿ ಕಛೇರಿಯಲ್ಲಿ ಸೇವೆ ಸಲ್ಲಿಸುತ್ತಿರುತ್ತಾರೆ.
೯)	ಎ–೫೮:೧	ವೈ. ಎಸ್. ಮಲ್ಲೇಶಗೌಡ, ಸಹಾಯಕ ಇಂಜಿನಿಯರ್, ಲೋಕೋಪಯೋಗಿ ಇಲಾಖೆ.	ಜೀವನಭೀಮಾನಗರದ ಕಟ್ಟಡಗಳ ಕಛೇರಿಯಲ್ಲಿ ಸೇವೆ ಸಲ್ಲಿಸುತ್ತಿರುತ್ತಾರೆ.

೧	೨	೩	೪
೧೦)	ಎ-೧೧೯:೧	ಪಿ.ವಿ. ಕರಿಬಸಪ್ಪ, ಆಬ್ಕಾರಿ ಸಚಿವರ ಆಪ್ತ ಸಹಾಯಕ.	ಕ್ರೀ ರಾಜ್ಯ ಕ್ರೀಡಾ ಪರಿಷತ್ತಿನ ಅಧ್ಯಕ್ಷರ ಆಪ್ತ ಸಹಾಯಕರಾಗಿ ಸೇವೆ ಸಲ್ಲಿಸುತ್ತಿರುತ್ತಾರೆ.
೧೧)	ಎ-೫೬:೩	ಜೀವಂರಾವ್, ಕಿರಿಯಸಹಾಯಕ, ಮುಖ್ಯಮಂತ್ರಿಯವರ ಸಚಿವಾಲಯ.	ಸದರಿ ಹುದ್ದೆಯಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ.
೧೨)	ಎ-೧೩೭:೧	ಕವಟೇಕರ್, ಪೋಲೀಸ್ ಸಬ್-ಇನ್ಸ್‌ಪೆಕ್ಟರ್.	ಜೀವನಭೀಮಾನಗರದ ಪೋಲೀಸ್ ಠಾಣೆಯಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ.
೧೩)	ಸಿ-೩೭	ಕೆ.ವಿ. ನಂಜುಂಡೇಗೌಡ, ಕೃಷಿ ಸಚಿವರ ಆಪ್ತ ಕಾರ್ಯದರ್ಶಿ	ನಗರ ಸಭೆ ಕೌನ್ಸಿಲ್ ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸುತ್ತಿದ್ದಾರೆ.
೧೪)	ಸಿ-೬೦	ಜಿ. ಬಸವಣ್ಣೆಪ್ಪ, ವಿದ್ಯಾಸಚಿವರ ಆಪ್ತ ಕಾರ್ಯದರ್ಶಿ.	ಸದರಿ ಹುದ್ದೆಯಲ್ಲಿ ಸೇವೆ ಸುತ್ತಿರುತ್ತಾರೆ.
೧೫)	ಡಿ-೧೧	ಡಾ: ಸನಕ್, ವೈದ್ಯರು ಜೀವನಭೀಮಾನಗರದ ಸರ್ಕಾರಿ ಆಸ್ಪತ್ರೆ.	ಸದರಿ ಹುದ್ದೆಯಲ್ಲಿ ಸೇವೆ ಸಲ್ಲಿಸುತ್ತಿರುತ್ತಾರೆ.
೧೬)	ಡಿ-೫೧	ವಿ. ನಾರಾಯಣಸ್ವಾಮಿ, ಪ್ರಾರ್ಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರ ಆಪ್ತ ಕಾರ್ಯದರ್ಶಿ,	ಸಾರ್ವಜನಿಕ ಶಿಕ್ಷಣ ಇಲಾಖೆಗೆ ವರ್ಗಾವಣೆಯಾಗಿರುತ್ತಾರೆ.
೧೭)	ಡಿ-೧೫೦	ಎ.ಎಸ್. ರಾಮಪ್ಪ: ಪಶು ಸಂಗೋಪನಾ ಸಚಿವರ ಆಪ್ತ ಕಾರ್ಯದರ್ಶಿ.	ಸಾರ್ವಜನಿಕ ಶಿಕ್ಷಣ ಇಲಾಖೆಗೆ ವರ್ಗಾವಣೆಯಾಗಿರುತ್ತಾರೆ.
೧೮)	ಡಿ-೩೦	ತುಳಸೀರಾಮಂ, ಸಹಾಯಕ ಇಂಜಿನಿಯರ್ ಲೋಕೋಪಯೋಗಿ ಇಲಾಖೆ.	ಸದರಿ ಹುದ್ದೆಯಲ್ಲಿ ಸೇವೆ ಸಲ್ಲಿಸುತ್ತಿರುತ್ತಾರೆ.
೧೯)	ಎ-೧೧೫:೩	ಗಂಗಾದರರಾಚಾರ್, ಗೃಹ ಸಚಿವ ಆಪ್ತ ಸಹಾಯಕ	ಸದರಿ ಹುದ್ದೆಯಲ್ಲಿ ಸೇವೆ ಸಲ್ಲಿಸುತ್ತಿರುತ್ತಾರೆ.
ವಸಂತನಗರ ಮತ್ತು ಜಯಮಹಲ್ ಬಡಾವಣೆ			
೨೦)	ಸಿ-೨೦	ಗೋಕುಲರಾಮಂ, ಮಾನ್ಯ ಮುಖ್ಯಮಂತ್ರಿಯವರ ಉಪಕಾರ್ಯದರ್ಶಿಗಳು.	ಹೆಚ್ಚಿನ ವ್ಯಾಸಂಗಕ್ಕಾಗಿ ವಿದೇಶಕ್ಕೆ ತೆರಳಿರುತ್ತಾರೆ.
೨೧)	ಸಿ-೨೭	ಕೆ. ದೊಡ್ಡೆಗೌಡ, ಸದಸ್ಯರು, ಕ, ಲೋಕಸೇವಾ ಆಯೋಗ.	ಸದರಿ ಹುದ್ದೆಯಲ್ಲಿರುತ್ತಾರೆ.

೧	೨	೩	೪
೨೨)	ಸಿ.–೨೮	ಎಸ್.ಜಿ. ಕಲ್ಲೂರ್. ಸದಸ್ಯರು, ಕ. ಲೋಕ ಸೇವಾ ಆಯೋಗ,	ಸದರಿ ಹುದ್ದೆಯಲ್ಲಿರುತ್ತಾರೆ.
೨೩)	ಸಿ–೨೪	ಎಲ್.ವಿ. ನಾಗರಾಜನ್, ಉಪಕಾರ್ಯದರ್ಶಿ, ಆರ್ಥಿಕ ಇಲಾಖೆ.	ಸದರಿ ಹುದ್ದೆಯಲ್ಲಿ ಸೇವೆ ಸಲ್ಲಿಸುತ್ತಿರುತ್ತಾರೆ.
೨೪)	ಸಿ–೨೯	ಎಂ. ವೈ. ಪೀರ್ ಸದಸ್ಯರು, ಕ. ಲೋಕಸೇವಾ ಆಯೋಗ.	ಸದರಿ ಹುದ್ದೆಯಲ್ಲಿರುತ್ತಾರೆ.
೨೫)	ಸಿ–೧೪	ಎಸ್. ಜಿ. ಚಿಕ್ಕಮಠ್, ಕಂದಾಯ ಸಚಿವರ ಆಪ್ತ ಕಾರ್ಯದರ್ಶಿಗಳು.	ಸದರಿ ಹುದ್ದೆಯಲ್ಲಿರುತ್ತಾರೆ. ನ್ಯಾಯಾಲಯದಲ್ಲಿ ಪೊಕದ್ದಮೆ ಸಲ್ಲಿಸಿ ವಸತಿಗೃಹವನ್ನು ಖಾಲಿ ಮಾಡಲು ಹೊರಡಿಸಿದ ಪೋಟೀಸಿಗೆ ನ್ಯಾಯಾಲಯ ತಡೆಯಾಜ್ಞೆ ನೀಡಿರುವುದರಿಂದ ವಸತಿಗೃಹದಲ್ಲಿ ವಾಸ ಮುಂದುವರಿಸಿರುತ್ತಾರೆ.
ಜಯಮಹಲ್ ಬಡಾವಣೆ:—			
೨೬)	ಡಿ–೧	ಕೆಂಪಯ್ಯ, ಆರೋಗ್ಯ ಸಚಿವರ ವಾಹನ ಚಾಲಕ	ಸದರಿ ಹುದ್ದೆಯಲ್ಲಿ ಸೇವೆ ಸಲ್ಲಿಸುತ್ತಿರುತ್ತಾರೆ.
೨೭)	ಡಿ–೬	ಜರಣಪ್ಪ ಡಿ. ಜಿಂಜೋಲಿ. ರಾಜ್ಯ ನೀರಾವರಿ ಸಚಿವರ ಆಪ್ತ ಸಹಾಯಕ.	ಇವರ ಸೇವೆಯನ್ನು ಮಾತೃ ಇಲಾಖೆಗೆ ಹಿಂದಿರುಗಿಸಲಾಗಿದೆ ಮತ್ತು ವಸತಿಗೃಹದಿಂದ ಖಾಲಿ ಮಾಡಿಸಲು ಕ್ರಮ ತೆಗೆದುಕೊಳ್ಳಲಾಗಿದೆ.
೨೮)	ಡಿ–೧೩	ಸೈಯದ್ ಗೌಸ್ ಪಾಷ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರ ಆಪ್ತ ಸಹಾಯಕ.	ಸದರಿ ಹುದ್ದೆಯಲ್ಲಿ ಮುಂದುವರಿದಿರುತ್ತಾರೆ.
೨೯)	ಡಿ–೧೫	ಎಸ್. ಸರವಣನ್, ಲೋಕೋಪಯೋಗಿ ಮತ್ತು ನೀರಾವರಿ ಸಚಿವರ ಆಪ್ತ ಸಹಾಯಕ.	ಸದರಿ ಹುದ್ದೆಯಲ್ಲಿ ಸೇವೆ ಸಲ್ಲಿಸುತ್ತಿರುತ್ತಾರೆ.
೩೦)	ಡಿ–೧೮	ಜಯತೀರ್ಥ ಪಿ ಗಲಿಗಲಿ. ವಿಧಾನ ಪರಿಷತ್ತಿನ ಉಪಸಭಾಪತಿಯವರ ಆಪ್ತ ಸಹಾಯಕ.	ಸದರಿ ಹುದ್ದೆಯಿಂದ ವರ್ಗಾವಣೆಯಾಗಿರುತ್ತಾರೆ. ವಸತಿಗೃಹದಿಂದ ಖಾಲಿ ಮಾಡಿಸಲು ಕ್ರಮತೆಗೆದುಕೊಳ್ಳಲಾಗುತ್ತಿದೆ.
೩೧)	ಸಿ–೨	ಎ.ಎಸ್. ಕಂಪಾಪುರ್‌ಮಠ್, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ಯ ಸಚಿವರ ಆಪ್ತ ಕಾರ್ಯದರ್ಶಿ,	ಈಗ ವಿಧಾನಸಭಾಧ್ಯಕ್ಷರ ಆಪ್ತ ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸುತ್ತಿದ್ದಾರೆ.

೧	೨	೩	೪
೩೨)	ಸಿ–೫	ವಿ. ಆರ್. ಕುಲಕರ್ಣಿ, ಮುಖ್ಯಮಂತ್ರಿಯವರ ಅಧೀನ ಕಾರ್ಯದರ್ಶಿ.	ಸದರಿ ಹುದ್ದೆಯಿಂದ ವರ್ಗಾವಣೆ ಹೊಂದಿರುತ್ತಾರೆ. ವಸತಿಗೃಹ ದಿಂದ ಖಾಲಿ ಮಾಡಿಸಲು ಕ್ರಮ ತೆಗೆದುಕೊಳ್ಳಲಾಗುತ್ತಿದೆ.
೩೩)	ಸಿ–೭	ಎಸ್. ಯೋಗಪ್ಪನವರ್, ತೋಟಗಾರಿಕೆ ಮತ್ತು ಕೃಷಿ ಸಚಿವರ ಆಪ್ತ ಕಾರ್ಯದರ್ಶಿ.	ಸದರಿ ಹುದ್ದೆಯಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ.
೩೪)	ಸಿ–೧೦	ಕೆ. ಎಂ. ಕೋಟಿ. ಸದಸ್ಯರು, ಕ. ಲೋಕಸೇವಾ ಆಯೋಗ.	ಸದರಿ ಹುದ್ದೆಯಲ್ಲಿರುತ್ತಾರೆ.
೩೫)	ಸಿ–೨೨	ಆರ್.ಜಿ. ಮಾಲೀಕರ್, ಉಪಲೋಕಾಯುಕ್ತ ಆವರ ಆಪ್ತ ಕಾರ್ಯದರ್ಶಿ,	ಸದರಿ ಹುದ್ದೆಯಲ್ಲಿರುತ್ತಾರೆ.
೩೬)	ಸಿ–೧೧(ಎ)	ಬಾಬುರಾವ್ ಮುಡಬಿ, ಸಮಾಜ ಕಲ್ಯಾಣ ಸಚಿವರ ಆಪ್ತ ಕಾರ್ಯದರ್ಶಿ	ಸದರಿ ಹುದ್ದೆಯಲ್ಲಿರುತ್ತಾರೆ.
೩೭)	ಸಿ–೧೫(ಎ)	ವಿ. ಶಶಿಧರ್, ಗೃಹಸಚಿವರ ಆಪ್ತ ಕಾರ್ಯದರ್ಶಿ.	ಸದರಿ ಹುದ್ದೆಯಲ್ಲಿರುತ್ತಾರೆ.
೩೮)	ಸಿ–೧೮(ಎ)	ಬಿ. ಎ, ಹರೀಷ್‌ಗೌಡ, ಅರಣ್ಯ, ಗಣಿ ಮತ್ತು ಭೂವಿಜ್ಞಾನ ಸಚಿವರ ಆಪ್ತ ಕಾರ್ಯದರ್ಶಿ.	ಸದರಿ ಹುದ್ದೆಯಲ್ಲಿ ಸೇವೆ ಸಲ್ಲಿಸುತ್ತಿರುತ್ತಾರೆ.
೩೯)	ಸಿ–೧೯(ಎ)	ಪಿ. ಎಸ್. ಶ್ರೀನಿವಾಸಾಚಾರಿ, ರಾಜ್ಯ ರೇಷ್ಮೆ ಮತ್ತು ಪಶು ಸಂಗೋಪನಾ ಸಚಿವರ ಆಪ್ತ ಕಾರ್ಯದರ್ಶಿ.	ಸದರಿ ಸೇವೆಯಲ್ಲಿ ಮುಂದುವರೆಸಿರುತ್ತಾರೆ.
೪೦)	ಸಿ–೭(ಎ)	ಜಯರಾಮರಾಜ ಅರಸ್, ರಾಜ್ಯರಸ್ತೆ ಸಾರಿಗೆ ಮತ್ತು ಬಂಧೀಖಾನೆ ಸಚಿವರ ಆಪ್ತ ಕಾರ್ಯದರ್ಶಿ.	ಸದರಿ ಸೇವೆಯಲ್ಲಿ ಮುಂದುವರೆದಿರುತ್ತಾರೆ.

ನೇಸರಗಿ ಗ್ರಾಮದಲ್ಲಿ ಗ್ರಾಮೀಣ ಬ್ಯಾಂಕ್ ಕಟ್ಟಡ ಕಟ್ಟುವ ಬಗ್ಗೆ

೪೧೧. ಶ್ರೀ ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ).—ಮಾನ್ಯ ಲೋಕೋಪಯೋಗಿ ಆಚ್ಚುಕಟ್ಟು ಪ್ರದೇಶಾಭಿವೃದ್ಧಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಬೆಳಗಾಂ ಜಿಲ್ಲೆಯ ಬೈಲಹೊಂಗಲ ತಾಲ್ಲೂಕು ನೇಸರಗಿ ಗ್ರಾಮದಲ್ಲಿ ಕಟ್ಟುತ್ತಿರುವ ಗ್ರಾಮೀಣ ಬ್ಯಾಂಕ್ ಕಟ್ಟಡ ಅರ್ಧಕ್ಕೆ ನಿಂತಿರುವುದು ಸರಕಾರದವರ ಗಮನಕ್ಕೆ ಬಂದಿದೆಯೇ ?

ಆ) ಅದನ್ನು ಪೂರ್ತಿಗೊಳಿಸಲು ಸರಕಾರದವರು ಕೈಗೊಂಡಿರುವ ಕ್ರಮವೇನು ?